# ದೂರ ತೀರ ಯಾನದಲ್ಲಿ 'ಗೌರಿ'



**2018**ರಲ್ಲಿ ಬಿಡುಗಡೆಯಾದ, ಮಂಸೋರೆ ನಿರ್ದೇಶನದ 'ನಾತಿಚರಾಮಿ', ಸೂಕ್ಷ್ಮ ಸಂವೇದನೆಯ ಕಾರಣಕ್ಕೆ ಮೆಚ್ಚುಗೆ ಪಡೆದುಕೊಂಡಂಥ ಸಿನಿಮಾ. ಈ ಸಿನಿಮಾದಲ್ಲಿ ಗೌರಿ ಪಾತ್ರದಲ್ಲಿ ನಟಿ ಶ್ರುತಿ ಹರಿಹರನ್ ತಮ್ಮ ಭಾವಾಭಿನಯದಿಂದ ಹೆಣ್ಣಿನ ಅಂತರಂಗದ ತುಮುಲಗಳನ್ನು ಬಿಡಿಸಿಡುವಲ್ಲಿ ಗೆದ್ದಿದ್ದರು. ಶ್ರುತಿ ಅವರ ಈ ನಟನೆಗೆ ಬಹಳಷ್ಟು ಮೆಚ್ಚುಗೆ ವ್ಯಕ್ತವಾಗಿತ್ತು.

ಅದೇ ಗೌರಿ ಈಗ ಮತ್ತೆ ತೆರೆ ಮೇಲೆ ಕಾಣಿಸಿಕೊಳ್ಳುತ್ತಿದ್ದಾರೆ. ಮಂಸೋರೆ ನಿರ್ದೇಶನದ 'ದೂರ ತೀರ ಯಾನ' ಸಿನಿಮಾದಲ್ಲಿ 'ಗೌರಿ' ಪಾತ್ರಧಾರಿಯಾಗಿಯೇ ಶ್ರುತಿ ಹರಿಹರನ್ ವಿಶೇಷವಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಈ ಕುರಿತು ಸಂದರ್ಶನವೊಂದರಲ್ಲಿ ಮಾತು ಹಂಚಿಕೊಂಡಿರುವ ಅವರು, ''ನನ್ನ ಕರಿಯರ್‌ನಲ್ಲಿ 'ನಾತಿಚರಾಮಿ' ಬಹಳ ಮುಖ್ಯ ಸಿನಿಮಾ. ನಾನು ಮಾಡಿದ ಪಾತ್ರಗಳಲ್ಲಿ 'ಗೌರಿ' ಪಾತ್ರ ಬಹಳ ಸವಾಲಿನದ್ದಾಗಿತ್ತು. ಕೆಲವೊಮ್ಮೆ ಕೆಲವು ಪಾತ್ರಗಳು ನಮ್ಮನ್ನು ಅಂಟಿಕೊಂಡುಬಿಡುತ್ತವೆ. ಕೆಲ ಕಾಲ ನಾವು ಅದರೊಂದಿಗೇ ಬದುಕುತ್ತೀವಿ. ನಮ್ಮ ಜೀವನದಲ್ಲಿಯೂ ಆ ಪಾತ್ರ ಬೆರೆತು ಹೋಗುತ್ತದೆ. ಪಾತ್ರದ ಪ್ರಭಾವವೇ ಹಾಗಿರುತ್ತದೆ. ಹಾಗೇ 'ಗೌರಿ' ನನ್ನೊಳಗೆ ಇಳಿದಂಥ ಒಂದು ಗಾಢ ಪಾತ್ರ. ತನ್ನ ಜೀವನದ ಮಾಲೀಕತ್ವವನ್ನು ತಾನೇ ತೆಗೆದುಕೊಂಡಿದ್ದ, ತನ್ನ ರೀತಿಯಲ್ಲಿ ತಾನಿರಲು ಭಯಪಡದ ಆ ಬೋಲ್ಡ್ ಪಾತ್ರ ನನ್ನನ್ನು ಬಹಳ ಆವರಿಸಿತ್ತು'' ಎಂದಿದ್ದಾರೆ ಶ್ರುತಿ.

''ದೂರ ತೀರ ಯಾನ' ಸಿನಿಮಾದಲ್ಲಿನ ತಮ್ಮ ಪಾತ್ರದ ಬಗ್ಗೆ ಮಾತನಾಡಿರುವ ಅವರು, 'ಸಿನಿಮಾದಲ್ಲಿ ನನ್ನದು ಚಿಕ್ಕ ಪಾತ್ರ. ಎರಡು ದಿನಗಳಲ್ಲಿ ನನ್ನ ಪಾತ್ರದ ಚಿತ್ರೀಕರಣ ಮುಗಿಯಿತು. 'ನಾತಿಚರಾಮಿ'ಯ ಗೌರಿ ಈಗ ಟ್ರೆಕ್ಕಿಂಗ್ ಮಾಡುತ್ತಿದ್ದಾಳೆ, ತನ್ನ ಜೀವನವನ್ನು ತನ್ನಷ್ಟಕ್ಕೆ ತಾನೇ ಕಳೆಯುತ್ತಿದ್ದಾಳೆ. ಆ ಗೌರಿಯ ಜೀವನ ಈ ಸಿನಿಮಾದಲ್ಲಿ ಒಂದು ಪ್ರೇರಣಾದಾಯಕ ಪಾತ್ರವಾಗಿ ಮುಂದುವರೆದಿದೆ'' ಎಂದಿದ್ದಾರೆ.

ಸಿನಿಮಾಗಳಲ್ಲಿ ಮಹಿಳಾ ಪಾತ್ರಗಳನ್ನು ಬಿಂಬಿಸುವ ರೀತಿಯ ಕುರಿತು ಅಭಿಪ್ರಾಯ ವ್ಯಕ್ತಪಡಿಸಿರುವ ಅವರು, 'ಮಹಿಳೆಯ ಪಾತ್ರ ಪೋಷಣೆಯಲ್ಲಿ ಗಮನಾರ್ಹ ಬದಲಾವಣೆಯಾಗಿದೆ. ಒಟಿಟಿ ವೇದಿಕೆಗಳು ಮಹಿಳೆಯನ್ನು ವಾಸ್ತವಿಕ ನೆಲೆಯಲ್ಲಿ ತೋರುವ ಪ್ರಯತ್ನಗಳಿಗೆ ಅವಕಾಶ ಒದಗಿಸಿಕೊಡುತ್ತಿವೆ' ಎಂದು ಶ್ಲಾಘಿಸಿದ್ದಾರೆ. ಇದೇ ಜುಲೈ 11ರಂದು 'ದೂರ ತೀರ ಯಾನ' ಸಿನಿಮಾ ಬಿಡುಗಡೆಯಾಗುತ್ತಿದೆ.

# ರಾಜ್ ಹೊಸತನದ ಕನವರಿಕೆ



ನಟ, ನಿರ್ದೇಶಕ ರಾಜ್ ಬಿ. ಶೆಟ್ಟಿ, ಮತ್ತೆ ಸ್ಪಾಟ್‌ಲೈಟ್‌ನಲ್ಲಿದ್ದಾರೆ. ಈ ಬಾರಿ ನಿರ್ದೇಶಕ ಅಥವಾ ನಟನಾಗಲ್ಲದೇ ತಮ್ಮದೇ ನಿರ್ಮಾಣ ಸಂಸ್ಥೆ ಮೂಲಕ ಕಥೆಗಾರರನ್ನು ಬೆಂಬಲಿಸಿ ಬರುತ್ತಿದ್ದಾರೆ.

ರಾಜ್ ಬಿ. ಶೆಟ್ಟಿ ಅವರ 'ಲೈಟರ್ ಬುದ್ಧ ಫಿಲ್ಮ್ಸ್'ನಿಂದ ಮೂಡಿಬರುತ್ತಿರುವ 'ಸು ಫ್ರಂ ಸೋ' ಸಿನಿಮಾ ಬಿಡುಗಡೆಗೂ ಮುನ್ನವೇ ಕುತೂಹಲ ಹುಟ್ಟುಹಾಕಿದೆ. ಕರಾವಳಿಯ ಕಾಮಿಡಿ ಹಾರರ್ ಥ್ರಿಲ್ಲರ್ ಕಥಾಹಂದರದ ಈ ಸಿನಿಮಾ ಜನರ ಮನ ಗೆಲ್ಲುವ ಭರವಸೆಯನ್ನೂ ಅವರು ವ್ಯಕ್ತಪಡಿಸಿದ್ದಾರೆ.

''ಪ್ರೊಡಕ್ಷನ್ ಹೌಸ್ ಆಗಿ ನಮ್ಮ ಕೆಲಸ, ಉತ್ತಮ ಸಿನಿಮಾಗಳನ್ನು ನೀಡುವುದು. ಕರ್ನಾಟಕದ ಹೊರಗಿನವರು ನೋಡಿದರೂ ನಮ್ಮ ಸಂಸ್ಕೃತಿ, ಜನರು ಹಾಗೂ ಈ ನೆಲದ ಸೊಗಡನ್ನು ಸಿನಿಮಾದ ಮೂಲಕ ಅನುಭವಿಸಬೇಕು. ಅದನ್ನೇ 'ಸು ಫ್ರಂ ಸೋ' ಸಿನಿಮಾ ಮಾಡುತ್ತದೆ'' ಎಂದು ಹೇಳಿದ್ದಾರೆ.

ತುಳು ಸಿನಿಮಾದಲ್ಲಿ ಪರಿಚಿತ ಹೆಸರಾಗಿರುವ ಜೆಪಿ ತುಮಿನಾಡ್ 'ಸು ಫ್ರಂ ಸೋ' ಮೂಲಕ ಕನ್ನಡದಲ್ಲಿ ಮೊದಲ ಬಾರಿ ನಿರ್ದೇಶನಕ್ಕೆ ಇಳಿದಿದ್ದಾರೆ.

'ಕನ್ನಡ ಸಿನಿಮಾರಂಗಕ್ಕೆ ಹೊಸ ಮುಖಗಳು, ಹೊಸ ದನಿಗಳ ಅಗತ್ಯವಿದೆ. ಈ ನಿರ್ಮಾಣ ಸಂಸ್ಥೆಯ ಗುರಿ, ಹೊಸ ಪ್ರತಿಭೆಗಳನ್ನು ಪರಿಚಯಿಸುವುದು ಹಾಗೂ ಅವರು ಬೆಳೆಯುವಂತೆ ಮಾಡುವುದು. ಸಿನಿಮಾದ ಪ್ರತಿ ವಿಭಾಗದಲ್ಲಿಯೂ ಈ ಸಿದ್ಧಾಂತವನ್ನು ಪಾಲಿಸಲಾಗಿದೆ. ತಾಂತ್ರಿಕವಾಗಿಯೂ ಹೊಸಬರಿಗೆ ಅವಕಾಶ ನೀಡಲಾಗಿದೆ' ಎಂದಿದ್ದಾರೆ.

'ಪ್ರೇಕ್ಷಕರು ಹೊಸತನ್ನು ನೋಡಲು ಬಯಸುತ್ತಾರೆ. ಹೊಸ ಅನುಭವ ನಿರೀಕ್ಷಿಸುತ್ತಾರೆ. ಹೀಗಾಗಿ ಹೊಸ ಹೊಸ ಮುಖಗಳು, ಹೊಸತನವೇ ಆದ್ಯತೆ' ಎಂದಿದ್ದಾರೆ ರಾಜ್.